## ಮಾತು-ಕತೆ

ಮಾತು ಶುರುವಾದುದು ತುಂಬಾ ದಿನಗಳ ನಂತರ ಭೇಟಿಯಾದ ಇಬ್ಬರು ಗೆಳೆಯರ ನಡುವಣ ಉಭಯಕುಶಲೋಪರಿ ಮೂಲಕ. ಮಾತು–ಕತೆ ನಡೆದುದು ಬೆಂಗಳೂರಿನ ಜೆ.ಪಿ. ನಗರದಲ್ಲಿನ ಮನೆಯಲ್ಲಿ. ಮನೆಯನ್ನೇ ನೆಪವನ್ನಾಗಿಸಿಕೊಂಡ ಎಸ್. ದಿವಾಕರ್, ''ಈ ಮನೆಗೆ ಬಂದು ಎಷ್ಟು ವರ್ಷ ಆಯ್ತು?'' ಎಂದು ಮಾತಿಗೆ ಚಾಲನೆ ಕೊಟ್ಟರು. ''ಮೂವತ್ತೈದು ವರ್ಷ ಆಯ್ತು. ಆಗಿನ ಜೆ.ಪಿ. ನಗರವೂ ಈಗಿಲ್ಲ, ಬೆಂಗಳೂರೂ ಈಗಿಲ್ಲ'' ಎನ್ನುವ ಎಚ್.ಎಸ್. ರಾಘವೇಂದ್ರ ರಾವ್ ಅವರ ಉದ್ಗಾರದಲ್ಲಿ ನಗರದ ಬೆಳವಣಿಗೆ ಕುರಿತು ವಿಮರ್ಶೆಯ ಟಿಪ್ಪಣಿಯೊಂದು ಇದ್ದಂತಿತ್ತು.

''ಆಗ ಊರಾಚೆ ಇತ್ತು. ಈಗ ಊರ ಒಳಗೆ ಬಂದು ಬಿಟ್ಟಿದೆ'' ಎಂದರು ದಿವಾಕರ್. ಈ ಆಚೆ–ಒಳಗಿನ ವಿಶೇಷಣವನ್ನೇ ಎಚ್‌ಎಸ್‌ಆರ್ ರೂಪಕವಾಗಿ ಬಳಸಿಕೊಳ್ಳಲು ಪ್ರಯತ್ನಿಸಿದರು.

''ಊರಾಚೆ, ಊರ ಒಳಗೆ ಅಂದಾಗ ಒಂದು ಸಂಗತಿ ಹಂಚಿಕೊಳ್ಳಬೇಕನ್ನಿಸುತ್ತದೆ. ನಾನೂ ನೀವು ಹೆಚ್ಚೂಕಡಿಮೆ ಒಂದೇ ವಯಸ್ಸಿನವರು. ನಮ್ಮ ಪ್ರಯಾಣ ಸರಿಸುಮಾರು ಒಂದೇ ಕಾಲದಲ್ಲಿ ನಡೆದುಕೊಂಡು ಬಂದಿದೆ. ಆದರೆ, ನಿಮ್ಮ ಬದುಕಿನ ಅಗತ್ಯಗಳು ನಿಮ್ಮ ಬದುಕಿನ ಬಹುಪಾಲನ್ನು ಕರ್ನಾಟಕದಾಚೆಗೆ ಇರುವಂತೆ ಮಾಡಿದವು. ನಾನು ನನ್ನ ಬದುಕಿನ ಸುಮಾರು ಐವತ್ತೈದು ವರ್ಷಗಳನ್ನು ಬೆಂಗಳೂರಿನಲ್ಲೇ ಕಳೆದಿರುವೆ. ನಿಮ್ಮ ಜೀವನಕ್ರಮದಲ್ಲಿ ಆದ ವ್ಯತ್ಯಾಸ ಕರ್ನಾಟಕದಲ್ಲಿ ಏನಾಗ್ತಿದೆ ಎನ್ನುವುದನ್ನು ಒಬ್ಬ ಔಟ್‌ಸೈಡರ್ ಆಗಿ ನೋಡುವ ಹೊಸ ನೋಟಕ್ಕೇನಾದರೂ ಕಾರಣವಾಯಿತಾ? ನಾನು ಇಲ್ಲಿದ್ದು ಇಲ್ಲಿನ ಘಟನೆಗಳನ್ನು ಸಾಹಿತ್ಯಿಕ ವ್ಯಕ್ತಿಗಳನ್ನು ನೋಡುವುದಕ್ಕೂ ನೀವು ನೋಡುವ ಕ್ರಮಕ್ಕೂ ವ್ಯತ್ಯಾಸ ಇದೆಯಾ?''

ಪ್ರಶ್ನೆ ಮತ್ತೂ ಬೆಳೆಯಿತು. ''ನಿಮ್ಮ ಓದು ಸಾಹಿತ್ಯ ಹಾಗೂ ಸಾಹಿತ್ಯದಾಚೆಗಿನ ಕಲೆಗಳ ಕುರಿತೂ ಇದೆ. ನೀವು ಕರ್ನಾಟಕದ ಹೊರಗಿದ್ದುದು ಒಂದು ಸಂಗತಿ. ಇನ್ನೊಂದು ನಿಮ್ಮ ವ್ಯಾಪಕ ಓದು – ಈ ಸಂಗತಿಗಳು ನೀವು ಸಾಹಿತ್ಯವನ್ನು ಹಾಗೂ ಇಲ್ಲಿನ ಸಂದರ್ಭವನ್ನು ಗ್ರಹಿಸಲಿಕ್ಕೆ ಯಾವ ರೀತಿ ನೆರವಾಗಿವೆ?''

ಎಚ್‌ಎಸ್‌ಆರ್ ಪ್ರಶ್ನೆಗೆ ದಿವಾಕರ್ ಕೊಂಚ ಆತ್ಮಚರಿತ್ರಾತ್ಮಕ ಸಂಗತಿಗಳಿಗೆ ಹೊರಳಿಕೊಂಡರು. ''ನಾನು ನಿಮ್ಮ ಹಾಗೆ ಕ್ರಮಬದ್ಧವಾಗಿ ವಿದ್ಯಾಭ್ಯಾಸ ಮಾಡಲಿಲ್ಲ. ಬಹಳ ಕಷ್ಟಪಟ್ಟು ಪಿಯುಸಿ ಮಾಡಿದೆ. ಸಣ್ಣಪುಟ್ಟ ಕೆಲಸ ಮಾಡ್ತಿದ್ದೆ. ವೈಯಕ್ತಿಕವಾಗಿ ಹಾಗೂ ಮಾನಸಿಕವಾಗಿ ವಿಕಾಸ ಹೊಂದಲಿಕ್ಕಾಗಿ ನಾನು ಇಲ್ಲಿಂದ ಹೊರಹೋಗುವ ಅವಶ್ಯಕತೆ ಇತ್ತು. ಅದೇ ಸಮಯದಲ್ಲಿ ಕೆಲವು ಎಡಪಂಥೀಯರೊಂದಿಗೆ ಸಂಪರ್ಕ ಇತ್ತು. ಮದರಾಸಿಗೆ ಹೋದೆ. ಅಲ್ಲಿ 'ಸೋವಿಯತ್ ಲ್ಯಾಂಡ್' ಪತ್ರಿಕೆಯಲ್ಲಿ ಕೆಲಸಕ್ಕೆ ಸೇರಿದೆ. ಅಲ್ಲಿಯವರೆಗೆ ಕುವೆಂಪು, ಬೇಂದ್ರೆ, ನರಸಿಂಹಸ್ವಾಮಿ ನನಗೆ ಪ್ರಿಯವಾದ ಕವಿಗಳು. ಮದರಾಸಿಗೆ ಹೋದ ಮೇಲೆ ರಷ್ಯನ್ ಸಾಹಿತ್ಯದಲ್ಲಿ, ಮುಖ್ಯವಾಗಿ ಗಾರ್ಕಿಯ ಬಗ್ಗೆ ಆಸಕ್ತಿ ಹುಟ್ಟಿತು. ಆಗ ಗಿರೀಶ ಕಾರ್ನಾಡರು 'ಆಕ್ಸ್‌ಫರ್ಡ್ ಪ್ರೆಸ್'ನಲ್ಲಿ ಮ್ಯಾನೇಜರ್. ಮೂರೂವರೆ ವರ್ಷಗಳ ಕಾಲ ನಿಯಮಿತವಾಗಿ ಅವರ ಮನೆಗೆ ಹೋಗ್ತಿದ್ದೆ. ಊಟ ಮಾಡುತ್ತಿದ್ದೆವು. ಸಿನಿಮಾ ನಟ ಶಿವರಾಂ ಕೂಡ ಆಗ ಮದರಾಸಿನಲ್ಲಿದ್ದರು. ಅವರು ಕೂಡ ಕಾರ್ನಾಡರ ಮನೆಗೆ ಬರುತ್ತಿದ್ದರು. ಆ ಕಾಲದಲ್ಲಿ ಅವರಿಗೆ ಕಾರು, ಮನೆ, ಅಡುಗೆಯವನಿದ್ದ. ಒಂದು ದಿನ ಕಾರ್ನಾಡರು, 'ದಿವಾಕರ್, ಎಂಟು ತಿಂಗಳಲ್ಲಿ ದೋಸ್ತೋವಸ್ಕಿಯ ಎಲ್ಲ ಪುಸ್ತಕ ಓದಬೇಕು ಅಂತಿದ್ದೀನಿ' ಎಂದರು. 'ನೀವು ಓದಿದರೆ ನಾನೂ ಓದ್ತೀನಿ' ಅಂದೆ. ಕಾರ್ನಾಡರ ಮೂಲಕವೇ ದೋಸ್ತೋವಸ್ಕಿ, ಗಾರ್ಕಿ, ಟಾಲ್‌ಸ್ಟಾಯ್ ಓದಿದ್ದು.